O.S .No. 261/18 7 PW -1

ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು

ದಿಃ 28-**02-2023**

ಮುಂದುವರೆದ ಪಾಟೀ ಸವಾಲುಃ ಶ್ರೀ .ಆರ್ ಎನ್ ಕೆ ವಕೀಲರಿಂದ

ನಿಪಿ-**3** ರಿಂದ **8** ಸ್ವಯಂ ಘೋಷಿತ ಆಸ್ತಿ ತೆರಿಗೆ ಅರ್ಜಿ ಎಂದರೆ ಸರಿ. ನಾನು ದಾವಾ ಅಸ್ತಿಗೆ ಸಂಬಂಧಿಸಿದಂತೆ ನಾನು ಪುರಸಭೆಯಿಂದ ಖಾತಾ ನಕಲು ಪಡೆದಿರುವುದಿಲ್ಲ. ಪುರಸಭೆಯಲ್ಲಿ ನನಗೆ ಸೇರಿದ ಆಸ್ತಿ ಎಷ್ಟು ವಿಸ್ತೀರ್ಣದಲ್ಲಿ ಇದೆ ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ, ಸಾಕ್ಷಿದಾರರು ಕಂದಾಯ ರಸೀದಿ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-**9** ರಿಂದ **23** ಕಂದಾಯ ರಸೀದಿಯಲ್ಲಿ ವಿಸ್ತೀರ್ಣ ನಮೂದು ಇಲ್ಲ ಎಂದರೆ ಸಾಕ್ಷಿದಾರರು ಕಂದಾಯ ಅಧಿಕಾರಿಗಳು ದಾವಾ ಅಸ್ತಿ ವಿಸ್ತೀರ್ಣವನ್ನು ಅವರ ಕಛೇರಿ ವಹಿಯಲ್ಲಿ ನಮೂದು ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ದಾವಾ ದಾಖಲು ಮಾಡುವಾಗ ದಾವಾ ಅಸ್ತಿಯ ಖಾತಾ ನಕಲು ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ದಾವಾ ಅಸ್ತಿ ವಿಸ್ತೀರ್ಣದಲ್ಲಿ ಸ್ವಾಧೀನ ಇಲ್ಲದ ಕಾರಣ ನಾನು ದಾವಾ ಆಸ್ತಿಯಲ್ಲಿ ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ನನಗೆ ದಾವಾ ಅಸ್ತಿಯ ವಿಸ್ತೀರ್ಣದ ಹಕ್ಕು ಇಲ್ಲದ ಕಾರಣ ನನಗೆ ಪುರಸಭೆಯಿಂದ ಯಾವುದೇ ದಾಖಲಾತಿ ಒದಗಿಸಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಿವಿಲ್ ನ್ಯಾಯಾಧೀಶರು, ಸಕಲೇಶಪುರ